9	ಮಂಡ್ಯ
10	ಚಾಮರಾಜನಗರ
11	ಹಾಸನ ಘಟಕ – 1
12	ಚಿಕ್ಕಮಗಳೂರು
13	ಮಂಗಳೂರು ಘಟಕ – 2
14	ಪುತ್ತೂರು
15	ಚಿತ್ರದುರ್ಗ

ಸಾರಿಗೆ ಸಿಬ್ಬಂದಿಗಳಿಗೆ ಮತದಾನಕ್ಕೆ ಅವಕಾಶ

1648 (2007); ಶ್ರೀ ಆರ್. ಅಶೋಕ

ಅ) ರಾಜ್ಯದ ಸಾರಿಗೆ ಸಂಸ್ಥೆಗಳ ಸಿಬ್ಬಂದಿಗಳಿಗೆ ವಿಶೇಷವಾಗಿ ಬಸ್ ಚಾಲಕ – ನಿರ್ವಾಹಕರುಗಳು ಇತ್ತೀಚೆಗೆ ನಡೆದ ಮಹಾ ಚುನಾವಣೆಯಲ್ಲಿ ಮತದಾನಕ್ಕೆ ಪಾಲ್ಗೊಳ್ಳುವ ಅವಕಾಶದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂತಹ ಚುನಾವಣೆಗಳಲ್ಲಿ ಭಾಗವಹಿಸುವಂತಾಗಲೂ ಸಾರಿಗೆ ನಿಗಮ ಯಾವ ಮುಂಜಾಗ್ರತಾ ಕ್ರಮಕ್ಕೈಗೊಂಡಿದೆ;

ಇ) ಇವರುಗಳನ್ನು ಮತದಾನದಿಂದ ವಂಚಿತರಾಗುವಂತೆ ಮಾಡುವ ಕ್ರಮ ಸರಿಯೇ;

ಈ) ಹಾಗಿದ್ದಲ್ಲಿ, ಮತದಾನಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಕಲ್ಪಿಸದಿರಲು ಕಾರಣಗಳೇನು; ಇದರಿಂದಾಗಿ ಎಷ್ಟು ಜನ ನೌಕರ ಸಿಬ್ಬಂದಿಗಳು ವಿಶೇಷವಾಗಿ ನಿರ್ವಾಹಕ–ಚಾಲಕರು ವಂಚಿತರಾದಂತಾಗುತ್ತದೆ;

ಉ) ಮಿಲಟರಿ ರಕ್ಷಣಾ ಸಿಬ್ಬಂದಿಗಳಿಗೆ ಮತದಾನದ ಅವಕಾಶವಿರುವಾಗ ರಾಜ್ಯದ ಇಷ್ಟು ಸಂಖ್ಯೆಯ ಜನರು ಮತದಾನದಿಂದ ವಂಚಿತರಾಗದಂತೆ

ತಡೆಯಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು (ವಿವರ ಒದಗಿಸುವುದು)

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಇಲ್ಲ.

ಆ, ಇ, ಈ, ಉ) ಚುನಾವಣಾ ಕಾರ್ಯಕ್ಕೆ ನಿಯೋಜಿತರಾಗುವ ಸಿಬ್ಬಂದಿ ಗಳನ್ನು ಮತದಾನ ಕೇಂದ್ರಕ್ಕೆ ಕರೆದೊಯ್ಯುವ ಹಾಗೂ ಮತದಾನದ ನಂತರ ಪುನಃ ಕರೆತರುವ ಕಾರ್ಯಕ್ಕಾಗಿ ನಿಗಮಗಳು ಬಸ್ಸುಗಳನ್ನು ನೀಡಬೇಕಾಗಿರುತ್ತದೆ. ಚುನಾವಣಾ ದಿನದಂದು ಸಾರ್ವಜನಿಕರು ಪ್ರಯಾಣಿಸಲು / ತಮ್ಮ ಮತ ಚಲಾಯಿಸಲು ಅನುವಾಗುವಂತೆ ಅವಶ್ಯ ಸಂಖ್ಯೆಯ ಬಸ್ಸುಗಳನ್ನು ಸಹ ಆಚರಿಸಬೇಕಾದ ಅನಿವಾರ್ಯತೆ ಇರು ತ್ತದೆ.

ಆದಾಗ್ಯೂ ನಿಗಮದ ನೌಕರರು ಇತ್ತೀಚೆಗೆ ನಡೆದ ಮಹಾ ಚುನಾ ವಣೆಯ ದಿನದಂದು ತಮ್ಮ ಮತ ಚಲಾಯಿಸಲು ಅನುಕೂಲ ಮಾಡಿ ಕೊಡುವ ಉದ್ದೇಶದಿಂದ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

1. ಚುನಾವಣಾ ಕರ್ತವ್ಯದ ಮೇಲೆ ನಿಯೋಜಿತರಾಗುವ ಸಿಬ್ಬಂದಿಗಳು (ಚಾಲಕ/ಚಾಲಕ–ಕಂ–ನಿರ್ವಾಹರು ಸೇರಿ) ಅಂಚೆ ಮೂಲಕ ಮತದಾನ ಮಾಡುವ (ಪೋಸ್ಟಲ್ ಬ್ಯಾಲೇಟ್) ಮತ್ತು ಇ.ಡಿ.ಸಿ. (ಎಲೆಕ್ಷನ್ ಡ್ಯೂಟಿ ಸರ್ಟಿಫಿಕೇಟ್) ಮೇರೆಗೆ ಮತ ಚಲಾಯಿಸುವ ಸಿಬ್ಬಂದಿಗಳ (ಚಾಲಕರು ಸೇರಿ) ಪ್ರತ್ಯೇಕ ಪಟ್ಟಿ ಮಾಡಿ, ಜಿಲ್ಲಾ ಚುನಾವಣಾ ಅಧಿಕಾರಿ ರವರಿಂದ ಸಂಬಂಧಪಟ್ಟ / ಅನ್ವಯಿಸುವ ನಮೂನೆ 12 ಅಥವಾ 12 ಎ ಅನ್ನು ಪಡೆದು ಮತದಾನ ಮಾಡಲು ವ್ಯವಸ್ಥೆ ಮಾಡಿ ಅದರಂತೆ ಕ್ರಮ ಕೈಗೊಳ್ಳಲಾಗಿದೆ.

2. ಹಿಂದಿನ ದಿನ ರಾತ್ರಿ ಸೇವೆಯ ದೈನಂದಿನ ಕರ್ತವ್ಯದ ಮೇಲೆ ಹೊರ ರಾಜ್ಯ / ದೂರದ ಸ್ಥಳಗಳಿಗೆ ಹೋಗಲಿರುವ ಸಿಬ್ಬಂದಿಗಳ (ಚಾಲಕ /

ನಿರ್ವಾಹಕರು ಸೇರಿ) ಪಟ್ಟಿಯನ್ನು ಮಾಡಿ, ಅವರು ಅಂಚೆ ಮೂಲಕ ಮತದಾನ ಮಾಡಲು (ಪೋಸ್ಟಲ್ ಬ್ಯಾಲೇಟ್) ಅನುಕೂಲ ಮಾಡಿ ಕೊಡುವ ಸಲುವಾಗಿ ಜಿಲ್ಲಾ ಚುನಾವಣಾ ಅಧಿಕಾರಿರವರಿಂದ ಅನ್ವಯಿಸುವ ನಮೂನೆಯನ್ನು ಪಡೆದು ಮತದಾನದಕ್ಕೆ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

3. ಚುನಾವಣೆ ದಿನದಂದು ಸಾಮಾನ್ಯ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು (ಚಾಲಕ / ನಿರ್ವಾಹಕರು ಸೇರಿ) ಕರ್ತವ್ಯಕ್ಕೆ ಬರುವ ಮುಂಚಿತವಾಗಿ ಅಥವಾ ಕರ್ತವ್ಯ ಮುಗಿದ ನಂತರ ಅವರ ಅನುಕೂಲಕ್ಕೆ ಅನುಗಣವಾಗಿ ಮತ ಚಲಾಯಿಸಲು ಸಮಯಾವಕಾಶ ಮಾಡಿ ಕೊಡಲು ಕ್ರಮ ಕೈಗೊಳ್ಳಲಾಗಿದೆ.

4. ಚುನಾವಣಾ ದಿನದಂದು ಬಹುತೇಕ ಬಸ್ಸುಗಲು ಚುನಾವಣಾ ಕಾರ್ಯದ ಮೇಲೆ ಸಂಚರಿಸಲಿದ್ದು, ಕನಿಷ್ಠ ಸಂಖ್ಯೆಯ ಬಸ್ಸುಗಳು ಮಾತ್ರ ಘಟಕದಲ್ಲಿ ಇರುತ್ತವೆ. ಆದ್ದರಿಂದ, ಚುನಾವಣಾ ದಿನದಂದು ಕನಿಷ್ಠ ಸಂಖ್ಯೆಯ ತಾಂತ್ರಿಕ ಸಿಬ್ಬಂದಿಗಳನ್ನು ಮಾತ್ರ ಕರ್ತವ್ಯದ ಮೇಲೆ ಬಳಸಿಕೊಳ್ಳುವುದು ಮತ್ತು ಅವರನ್ನು ಮೊದಲನೇ ಅಥವಾ ಎರಡನೇ ಪಾಳಿಯಲ್ಲಿ ಬಳಸಿಕೊಳ್ಳುವುದು. ಚುನಾವಣೆ ದಿನದಂದು ಸಾಮಾನ್ಯ ಪಾಳಿಯನ್ನು ತಪ್ಪದೇ ರದ್ದುಪಡಿಸಲಾಗುವುದು.

5. ಅಲ್ಲದೆ, ಬಸ್ ನಿಲ್ದಾಣ, ಕಂಟ್ರೋಲ್ ಪಾಯಿಂಟ್ ಇತ್ಯಾದ ಕಾರ್ಯ ಸ್ಥಾನಗಳಲ್ಲಿಯೂ ಸಹ ಕನಿಷ್ಠ ಸಂಖ್ಯೆಯ ಸಿಬ್ಬಂದಿಗಳನ್ನು ನಿಯೋಜಿಸುವುದು ಮತ್ತು ಅವರನ್ನು ಮೊದಲನೇ ಅಥವಾ ಎರಡನೇ ಪಾಳಿಯಲ್ಲಿ ಬಳಸಿಕೊಳ್ಳುವುದು. ಚುನಾವಣಾ ದಿನದಂದು ಸಾಮಾನ್ಯ ಪಾಳಿಯನ್ನು ತಪ್ಪದೇ ರದ್ದುಪಡಿಸಲಾಗುವುದು.